ಇ) ಈ ಕ್ರೀಡಾಕೂಟವನ್ನು ಮೇಲೆ ತಿಳಿಸಿದ ಕಾರಣಗಳಿಂದ ಎರಡನೇ ತ್ರೈಮಾಸಿಕ ಆರಂಭವಾಗುವ ಸಮಯದಲ್ಲಿ ಅಥವಾ ಮಧ್ಯದಲ್ಲಿ ನಡೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. :

ಅ) ಹೌದು

ಆ) ಸರ್ಕಾರದ ಗಮನಕ್ಕೆ ಬಂದಿದೆ. ಆದುದರಿಂದ ಆಗಸ್ಟ್ 01 ರಿಂದ 24ರೊಳಗೆ ಕಾಲಾವಕಾಶ ಕೊಟ್ಟು ವಾತಾವರಣ ಚೆನ್ನಾಗಿ ಇರುವ ದಿನಗಳಲ್ಲಿ ಕ್ರೀಡಾ ಕೂಟವನ್ನು ನಡೆಸುವಂತೆ ತಿಳಿಸಿದೆ.

ಇ) ಕರ್ನಾಟಕ ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿ ಕ್ರೀಡಾಕೂಟಗಳು ರಾಜ್ಯ ಮಟ್ಟದಲ್ಲಿ ಗೆದ್ದ ಬಳಿಕ, ರಾಷ್ಟ್ರ ಮಟ್ಟದಲ್ಲಿ (ಎಸ್.ಜಿ.ಎಫ್.ಐ) ಸ್ಕೂಲ್‌ಗೇಂಫೇಡರೇಷನ್ ಆಫ್ ಇಂಡಿಯಾದವರು ನಡೆಸುವ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವರು.

ಸ್ಕೂಲ್‌ಗೇಂಫೇಡರೇಷನ್ ಆಫ್ ಇಂಡಿಯಾದವರು ಇಡೀ ದೇಶದ ಹವಾಮಾನ ಮತ್ತಿತರ ಅಂಶಗಳನ್ನು ಗಮನದಲ್ಲಿರಿಸಿಕೊಂಡು ರಾಷ್ಟ್ರಮಟ್ಟದ ಕ್ರೀಡಾಕೂಟಗಳನ್ನು ಪ್ರತಿ ವರ್ಷದ ಸೆಪ್ಟೆಂಬರ್ ತಿಂಗಳಿನಿಂದ ಪ್ರಾರಂಭಿಸುವರು.

ರಾಷ್ಟ್ರಮಟ್ಟದ ಕ್ರೀಡಾಕೂಟಗಳು ಸೆಪ್ಟೆಂಬರ್‌ನಲ್ಲಿ ಜರುಗುವಾಗ ಅದರಲ್ಲಿ ನಮ್ಮ ವಿದ್ಯಾರ್ಥಿ ಕ್ರೀಡಾಕೂಟಗಳು ಭಾಗವಹಿಸುವಂತಾಗಬೇಕಾದರೆ ನಮ್ಮ ಸ್ಪರ್ಧಾ ವೇಳಾ ಪಟ್ಟಿಯನ್ನು ಸೆಪ್ಟೆಂಬರ್ ದಿಂದ ಹಿಂದಕ್ಕೆ ನಿಯೋಜಿಸಬೇಕಾಗುತ್ತದೆ.

ಸೆಪ್ಟೆಂಬರ್‌ದೊಳಗೆ ನಮ್ಮ ರಾಜ್ಯದ ರಾಜ್ಯ ಶಾಲೆ ಹುಬ್ಬಳ್ಳಿ ಬ್ಲಾಕ್ ಜಿಲ್ಲೆ ಮಟ್ಟದ ಕ್ರೀಡಾ ಸ್ಪರ್ಧೆಗಳು ಮುಗಿದಿರಬೇಕಾಗುತ್ತದೆ. ಈ ಅನಿವಾರ್ಯತೆಯಿಂದಾಗಿ, ನಮ್ಮ ರಾಜ್ಯದ ವಿದ್ಯಾರ್ಥಿ ಕ್ರೀಡಾಕೂಟಗಳನ್ನು ಜುಲೈನಿಂದಲೇ ಪ್ರಾರಂಭಿಸಬೇಕಾಗುತ್ತದೆ. ಮತ್ತು ಸೆಪ್ಟೆಂಬರ್ ಹೊತ್ತಿಗೆ ಶಾಲಾಹಂತ, ಹೋಬಳಿ ಹಂತ, ಬ್ಲಾಕ್‌ಮಟ್ಟ, ಜಿಲ್ಲಾಮಟ್ಟ ಮತ್ತು ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಮುಗಿಸಿರಬೇಕಾಗಿರುತ್ತದೆ.

ಮಳೆಗಾಲವು ಮಲೆನಾಡು ಪ್ರದೇಶದಲ್ಲಿ ಜೂನ್‌ನಿಂದ ಸೆಪ್ಟೆಂಬರ್ ತಿಂಗಳಿನವರೆಗೂ ವ್ಯಾಪಿಸಿರುವುದರಿಂದ ಮಳೆಗಾಲ ಮುಗಿದ ಬಳಿಕ ರಾಜ್ಯದ ಕ್ರೀಡಾಸ್ಪರ್ಧೆಗಳನ್ನು ಪ್ರಾರಂಭಿಸಿದರೆ, ನಮ್ಮ ವಿದ್ಯಾರ್ಥಿ ಕ್ರೀಡಾಪಟುಗಳು ರಾಷ್ಟ್ರ ಮಟ್ಟದಲ್ಲಿ ಭಾಗವಹಿಸುವ ಅವಕಾಶವನ್ನು ಕಳೆದುಕೊಳ್ಳಬೇಕಾಗುತ್ತದೆ.

4997 (5978) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :– ಮಾನ್ಯ ವಸತಿ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯಕ್ಕೆ ಮಂಜೂರಾಗಿರುವ ವಾಲ್ಮೀಕಿ ಅಂಬೇಡ್ಕರ್ ಯೋಜನೆಯ ಮನೆಗಳ ಸಂಖ್ಯೆ ಎಷ್ಟು ?

ಆ) ಈ ಮನೆಗಳನ್ನು ಯಾವ ರೀತಿ ಹಂಚಿಕೆ ಮಾಡಲಾಗಿದೆ : (ಸ್ಥಳೀಯ ಸಂಸ್ಥೆವಾರು ವಿವರ ನೀಡುವುದು);

ಇ) ಮಂಜೂರಾದ ಮನೆಗಳಲ್ಲಿ ಪೂರ್ಣಗೊಳ್ಳದಿರುವ ಮನೆಗಳು ಎಷ್ಟು; ಖರ್ಚಾಗದೆ ಉಳಿದ ಹಣ ಎಷ್ಟು :

ಈ) ಈ ಸಾಲಿಗೆ ಮಂಜೂರಾಗಿರುವ ಮನೆಗಳು ಎಷ್ಟು; ಇವುಗಳನ್ನು ಹಂಚಿಕೆ ಮಾಡಲಾಗಿದೆಯೇ; ತೀರ್ಥಹಳ್ಳಿಪುರ ಪಂಚಾಯ್ತಿಗೆ ಈ ಸಾಲಿನಲ್ಲಿ ಮನೆಯ ಬೇಡಿಕೆ ಇರುವುದು ಸರ್ಕಾರದ ಗಮನದಲ್ಲಿದೆಯೆ;

ಉ) ಹಾಗಿದ್ದರೆ, ಈ ಸಾಲಿನಲ್ಲಿ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗುವುದು?

ಶ್ರೀ ಆಂಜನಮೂರ್ತಿ ವಸತಿ ಸಚಿವರು. :

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯಕ್ಕೆ ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಯಡಿ ಒಟ್ಟು 26053 ಮನೆಗಳು ಮಂಜೂರಾಗಿರುತ್ತವೆ.

ಆ) ಸರ್ಕಾರದ ಆದೇಶದ ಸಂಖ್ಯೆ : ವಇ 32(ಎ) ಕೊಮಂಲೆ 2002 ಬೆಂಗಳೂರು ದಿನಾಂಕ : 27/3/2003 ರಂತೆ ಘೋಷಿತ ಕೊಳಚೆ ಪ್ರದೇಶದ ನಿವಾಸಿಗಳು ಪ್ರಾರಂಭಿಕ ಠೇವಣಿ ನೀಡಿದ ನಂತರ ಆದ್ಯತೆ ಮೇಲೆ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗುತ್ತಿದೆ. ಒಟ್ಟು ಮಂಜೂರಾದ 26053 ಮನೆಗಳ ಪೈಕಿ 25863 ಮನೆಗಳ ನಿರ್ಮಾಣ ಕಾರ್ಯ ಮುಗಿದಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ 'ಅ' ನಲ್ಲಿ ಲಗತ್ತಿಸಿದೆ.

ಇ) ಸ್ಥಳದ ಬಗ್ಗೆ ನ್ಯಾಯಾಲಯದಲ್ಲಿ ತಕರಾರು ಇರುವುದರಿಂದ ಒಟ್ಟು 190 ಮನೆಗಳು ಪೂರ್ಣಗೊಂಡಿರುವುದಿಲ್ಲ. ಈ ಮನೆಗಳ ಮೊತ್ತ ರೂ.77.60 ಲಕ್ಷ ಬಾಕಿ ಉಳಿದಿರುತ್ತದೆ.

ಈ) 2005–06ನೇ ಸಾಲಿಗೆ ಒಟ್ಟು 8280 ಮನೆಗಳ ನಿರ್ಮಾಣಕ್ಕೆ ಮಂಜೂರಾತಿ ದೊರೆತಿರುತ್ತದೆ. ಪ್ರಾರಂಭಿಕ ಠೇವಣಿ ನೀಡಿರುವ 8280 ಫಲಾನುಭವಿಗಳಿಗೆ ಮನೆಗಳ ನಿರ್ಮಾಣ ಕೈಗೊಂಡು ಪೂರ್ಣಗೊಂಡ ಮೇಲೆ ಹಂಚಿಕೆ ಮಾಡಲಾಗುವುದು. ಈ ಸಾಲಿನಲ್ಲಿ ತೀರ್ಥಹಳ್ಳಿ ಪುರಪಂಚಾಯಿತಿಗೆ ಕೊಳಚೆ ಪ್ರದೇಶದ ನಿವಾಸಿಗಳು ಪ್ರಾರಂಭಿಕ ಠೇವಣಿ ನೀಡಿರುವುದಿಲ್ಲದ ಕಾರಣ ಬೇಡಿಕೆ ಇರುವುದಿಲ್ಲ.

ಉ) ಈ ಸಾಲಿನಲ್ಲಿ ಹಂತ 4 ರಲ್ಲಿ 3052 ಹಾಗೂ ಹಂತ 5 ರಲ್ಲಿ 3455 ಮನೆಗಳ ಪ್ರಸ್ತಾವನೆಗೆ ಕೇಂದ್ರ ಸರ್ಕಾರವು ಮಂಜೂರಾತಿ ನೀಡಿ ಹಣ ಬಿಡುಗಡೆ ಮಾಡಬೇಕಾಗಿರುತ್ತದೆ. ತೀರ್ಥಹಳ್ಳಿ ಪುರಪಂಚಾಯಿತಿಯ ಕೊಳಚೆ ಪ್ರದೇಶದ ನಿವಾಸಿಗಳು ಪ್ರಾರಂಭಿಕ ಠೇವಣಿ ನೀಡಿದಲ್ಲಿ ಆದ್ಯತೆ ಮೇರೆಗೆ ಮುಂದಿನ ಹಂತಗಳಲ್ಲಿ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು.

4998 (5615) ಶ್ರೀ ಅಶೋಕ್ ಆರ್ (ಉತ್ತರಹಳ್ಳಿ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಬೆಂಗಳೂರು ಉತ್ತರ ತಾಲ್ಲೂಕು ವ್ಯಾಪ್ತಿಗೆ ಒಳಪಟ್ಟಿರುವ ಅಂದ್ರಹಳ್ಳಿ, ವಿದ್ಯಾಮಾನನಗರ, ಸೌಮ್ಯಕಾಲಿನಗರ, ಹೇರೋಹಳ್ಳಿ, ತಿಗಳರಪಾಳ್ಯ, ತುಂಗಾನಗರ ಇತ್ಯಾದಿ ಈ ಪ್ರದೇಶಗಳಲ್ಲಿ ಸುಮಾರು ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯಿರುವುದು ನಿಜವೇ;

2. ಹಾಗಿದ್ದರೆ, ಈ ಪ್ರದೇಶದ ಸುತ್ತ–ಮುತ್ತಲೂ ಎಲ್ಲಿಯೂ ಸರ್ಕಾರಿ ಹೆರಿಗೆ ಆಸ್ಪತ್ರೆ, ಅಥವಾ ಸರ್ಕಾರದ ಆಸ್ಪತ್ರೆಯು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3. ಈ ನಿಟ್ಟಿನಲ್ಲಿ ಸರ್ಕಾರವು ಗ್ರಾಮಾಂತರ ಬಡಜನರಿಗೆ ಅನುಕೂಲವಾಗುವ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿ ಆಸ್ಪತ್ರೆಯನ್ನು ತೆಗೆಯಲು ಆಲೋಚಿಸಿದೆಯೇ;

4. ಹಾಗಿದ್ದಲ್ಲಿ, ಯಾವ ಪ್ರದೇಶದಲ್ಲಿ ಸ್ಥಾಪನೆಯನ್ನು ಮಾಡಲಾಗುವುದು; ಸ್ಪಷ್ಟವಾದ ವಿವರಗಳನ್ನು ನೀಡುವುದು ?

ಶ್ರೀ ಎನ್ . ಚಲುವರಾಯಸ್ವಾಮಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.:

1. ಅಂದ್ರಹಳ್ಳಿಯಲ್ಲಿ – 3029, ವಿದ್ಯಾಮಾನನಗರದಲ್ಲಿ – 1500, ಸೌಮ್ಯಕಾಳಿನಗರ – 2135, ಹೆರೋಹಳ್ಳಿ–3477, ತಿಗಳರಪಾಳ್ಯ – 2310, ತುಂಗಾನಗರ– 1298 ಜನಸಂಖ್ಯೆ ಇರುತ್ತದೆ.

2. ಈ ಪ್ರದೇಶದಲ್ಲಿ ಹೆರೋಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಘಟಕವು ಕಾರ್ಯನಿರ್ವಹಿಸುತ್ತಿದೆ.

3. ಇಲ್ಲ.

4. ಅಂದ್ರಹಳ್ಳಿ, ವಿದ್ಯಾಮಾನನಗರ, ಸೌಮ್ಯಕಾಳಿನಗರ, ಹೇರೋಹಳ್ಳಿ, ತಿಗಳರಪಾಳ್ಯ, ತುಂಗಾನಗರ ಈ ಎಲ್ಲಾ ಪ್ರದೇಶಗಳು ಹೆರೋಹಳ್ಳಿ ಪ್ರಾಥಮಿಕ ಆರೋಗ್ಯ ಘಟಕಕ್ಕೆ 2 ರಿಂದ 6 ಕಿ.ಮಿ. ವ್ಯಾಪ್ತಿಯಲ್ಲಿರುವುದರಿಂದ ಹೊಸ ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಅವಕಾಶವಿರುವುದಿಲ್ಲ.